ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)


ವಾಣಿಜ್ಯ ತೆರಿಗೆ ಅಧಿಕಾರಿ(ಜಾರಿ)-1, ಹಾಸನರವರ ಕಛೇರಿ ,ಸ್ವಾಮಿ ಅರ್ಕೇಡ್,ಹೆಚ್.ಡಿ.ಎಫ್.ಸಿ.

ಬ್ಯಾಂಕ್ ಎದುರು, ಕುವೆಂಪುನಗರ ಮುಖ್ಯ ರಸ್ತೆ, ಕುವೆಂಪುನಗರ, ಹಾಸನ-573 201,

ದೂರವಾಣಿ ಸಂ:08172-234428, ಇ-ಮೇಲ್:ctoenf1hsn@gmail.com


ಕ್ರ.ಸಂ.ವಾತೆಅ(ಜಾರಿ)-1/ಹಾಸನ/ ಹರಾಜು/ಟಿ-328/2023-24. ದಿನಾಂಕ: 02-03-2024.

## ಬ್ಯಾಟರಿ ಸ್ಕ್ರಾಪ್ ಸರಕಿನ ಹರಾಜು ಪ್ರಕಟಣೆ.

ವಾಣಿಜ್ಯ ತೆರಿಗೆ ಅಧಿಕಾರಿ, (ಜಾರಿ)-1 ಹಾಸನ ಇವರು ದಿನಾಂಕ:10/11/2023 ರಂದು (Battery Scrap) ಸರಕನ್ನು ಜಿಎಸ್‌ಟಿ ಕಾಯ್ದೆ 2017, ಕಲಂ-130 ರಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತ ರೂ.20,58,168=00ನ್ನು ವಸೂಲಿ ಮಾಡುವ ಸಂಬಂಧವಾಗಿ, ಸರಕನ್ನು ಮಾತ್ರ "ಎಲ್ಲಿ ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ" ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ಆಸಕ್ತಿವುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ ಲಕೋಟೆಯನ್ನು **ದಿನಾಂಕ:13/03/2024 ರಂದು ಪೂರ್ವಾಹ್ನ:11-30ರ** ಸಮಯಕ್ಕೆ ವಾಣಿಜ್ಯ ತೆರಿಗೆ ಉಪ ಆಯುಕ್ತರು, (ಜಾರಿ) ಹಾಸನ ಇವರ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿವುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ **ಬಿಡ್**‌ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

### : ಷರತ್ತುಗಳು ಮತ್ತು ನಿಬಂಧನೆಗಳು:

(1). ಮುಟ್ಟುಗೋಲು ಹಾಕಿಕೊಂಡಿರುವ 13,990 ಕೆ.ಜಿ. ಬ್ಯಾಟರಿ ಸ್ಕ್ರಾಪ್ ಸರಕನ್ನು ಹಾಸನದ ವಾಣಿಜ್ಯ ತೆರಿಗೆಗಳ ಕಛೇರಿಯ ಆವರಣದ ನೆಲಮಳಿಗೆಯಲ್ಲಿ ಇಟ್ಟಿದ್ದು, ಆಸಕ್ತಿವುಳ್ಳ ಖರೀದಿದಾರರು ದಿನಾಂಕ:07/03/2024 ರಂದು ಕಛೇರಿಯ ವೇಳೆಯಲ್ಲಿ (ಬೆಳಿಗ್ಗೆ: 10-30 ರಿಂದ ಸಂಜೆ: 5-00ರ ತನಕ) ಸದರಿ ಸರಕನ್ನು ಪರಿಶೀಲಿಸಬಹುದಾಗಿದೆ. (2).ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿವುಳ್ಳ ಖರೀದಿದಾರರು ಸರಕಿನ ಬಿಡ್‌ಗೆ ಭಾಗವಹಿಸಲು ಇಚ್ಛಿಸಿದಲ್ಲಿ ರೂ.2,05,817=00 (ಎರಡು ಲಕ್ಷದ ಐದು ಸಾವಿರದ ಎಂಟು ನೂರ ಹದಿನೇಳು ರೂಪಾಯಿಗಗಳು ಮಾತ್ರ), ಮೌಲ್ಯದ ಡಿ.ಡಿ.ಮೊತ್ತವನ್ನು "Commercial Tax Officer (Enforcement)-1, Hassan" ಇವರ ಹೆಸರಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ( 3). ತದನಂತರ ಆಸಕ್ತಿವುಳ್ಳ ಖರೀದಿದಾರರು (ಕಡ್ಡಾಯವಾಗಿ ಜಿ.ಎಸ್.ಟಿ ಕಾಯ್ದೆ ಅಡಿ ನೊಂದಾಯಿತರಾಗಿರಬೇಕು) ಸೀಲು ಮಾಡಿದ ಬಿಡ್ ಲಕೋಟೆ ಜೊತಗೆ ಡಿ.ಡಿ.ಯನ್ನು ನೋಂದಣಿ ಅಂಚೆ ಅಥವಾ ವೈಯಕ್ತಿವಾಗಿ ದಿನಾಂಕ:12/03/2024ರ ಸಾಯಂಕಾಲ 5-00 ಘಂಟೆಯ ಒಳಗಾಗಿ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಪೋಸ್ಟಲ್ ವಿಳಂಬಕ್ಕೆ ನಾವು ಜವಾಬ್ದಾರರಾಗಿರುವುದಿಲ್ಲ. (4). ಬಿಡ್ ಮೊತ್ತವನ್ನು ಸರಕಿಗೆ ಪ್ರತಿ ರೂಪಾಯಿ ಲೆಕ್ಕದಲ್ಲಿ ನೀಡುವುದು ಹಾಗೂ ಸರಕಿಗೆ ಷೆಡ್ಯೂಲ್ ಅನ್ವಯ, ಅನ್ವಯಿಸುವ ದರದಲ್ಲಿ ಜಿ.ಎಸ್.ಟಿ. ತೆರಿಗೆ ಪ್ರತ್ಯೇಕವಾಗಿರುತ್ತದೆ. (5). ಕಾರಣಾಂತರಗಳಿಂದ ಬಿಡ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿ ಹೊಂದಿರುತ್ತಾರೆ. (6). ಯಶಸ್ವಿಯಾದ ಬಿಡ್ಡುದಾರರು ಬಿಡ್ ಮೊತ್ತವನ್ನು 07 (ಏಳು) ದಿನಗಳೊಳಗಾಗಿ ಇ-ಪಾವತಿ ಮುಖಾಂತರ ಜಿ.ಎಸ್.ಟಿ. ಲೆಕ್ಕಕ್ಕೆ ಪಾವತಿಸಬೇಕು ಮತ್ತು ಸದರಿ ಖರೀದಿಯನ್ನು ಅ-ನೊಂದಾಯಿತ ಖರೀದಿಯೆಂದು ಪರಿಗಣಿಸಬೇಕು. (7). ನಿಗಧಿತ 07 (ಏಳು) ದಿನಗಳೊಳಗಾಗಿ ಪೂರ್ತಿ ಬಿಡ್‌ಮೊತ್ತವನ್ನು ಪಾವತಿ ಮಾಡದೇ ಇದ್ದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (8). ಪೂರ್ತಿ ಬಿಡ್ ಮೊತ್ತವನ್ನು ಪಾವತಿಸಿದ ನಂತರವೇ ಸರಕನ್ನು ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಹಸ್ತಾಂತರಿಸಲಾಗುವುದು. (9). ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ಸಹಿ/-

ವಾಣಿಜ್ಯ ತೆರಿಗೆ ಅಧಿಕಾರಿ

(ಜಾರಿ)-1, ಹಾಸನ.

Scanned with CamScanner